**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಹಾಗೂ ವಿಶೇಷ ನ್ಯಾಯಾಧೀಶರು ಚಿಕ್ಕಮಗಳೂರು**

# ವಿಶೇಷ ಪ್ರಕರಣ ಸಂಖ್ಯೆ: 07/2026

ಫಿರ್ಯಾದುದಾರರು: ಮೂಡಿಗೆರೆ ಪೋಲಿಸ್ ಠಾಣೆ ಚಿಕ್ಕಮಗಳೂರು ಜಿಲ್ಲೆ

-ವಿರುದ್ಧ-

ಆರೋಪಿತರು: ಸುದೀಪ್

**-ದೋಷಾರೋಪಣೆ-**

ಚಿಕ್ಕಮಗಳೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ವಿಶೇಷ ನ್ಯಾಯಾಧೀಶರಾದ ರವೀಂದ್ರ ಹೆಗಡೆ , ಎಂ.ಎ., ಎಲ್ ಎಲ್ ಎಂ. ಆದ ನಾನು

ಸುದೀಪ್
ಬಿನ್ ಸುರೇಶ್
32 ವರ್ಷ ಗಾರೆ ಕೆಲಸ
ವಾಸ: ಬಿಳುಗೊಳ ಗ್ರಾಮ
ಮೂಡಿಗೆರೆ ತಾಲೂಕು

ಆರೋಪಿಯಾದ ನಿಮ್ಮ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆ:

ಮೂಡಿಗೆರೆ ಪೋಲೀಸ್ ಠಾಣಾ ವ್ಯಾಪ್ತಿಯ ಬಿಳುಗೊಳ ಗ್ರಾಮದ ಶಿವಾಜಿನಗರದಲ್ಲಿರುವ ಚಾಸಾ:10 ರವರ ಮಾಲಿಕತ್ವದ ಮನೆಯನ್ನು ನಿಮ್ಮ ತಂದೆ ಚಾಸಾ:13 ರವರು ಬೋಗ್ಯಕ್ಕೆ ಪಡೆದುಕೊಂಡಿದ್ದು, ಆ ಮನೆಯಲ್ಲಿ ಚಾಸಾ:13 ಮತ್ತು ಆರೋಪಿಯಾದ ನೀವು ನಿಮ್ಮ ಸಂಸಾರದೊಂದಿಗೆ ವಾಸವಾಗಿದ್ದು, ದಿನಾಂಕ: 17.11.2025 ರಂದು ಸಂಜೆ 4.55 ಗಂಟೆ ಸಮಯದಲ್ಲಿ ಚಾಸಾ:1 ರವರು ಸಿಬ್ಬಂದಿಗಳೊಂದಿಗೆ ದಾಳಿ ಮಾಡಿದಾಗ ಆರೋಪಿಯಾದ ನೀವು ನಿಮ್ಮ ವಾಸದ ಮನೆಯ ಹಿಂಭಾಗದ ಹಿತ್ತಲಿನಲ್ಲಿ 5 ಗಾಂಜಾ ಗಿಡಗಳನ್ನು ಕಾನೂನು ಬಾಹಿರವಾಗಿ ಬೆಳೆದಿರುವುದು ಕಂಡು ಬಂದಿದ್ದು, ನೀವು ಒಟ್ಟು 3 ಕೆಜಿ 432 ಗ್ರಾಂ ತೂಕದ ಹಸಿ ಸೊಪ್ಪಿನ ಗಾಂಜಾ ಗಿಡಗಳನ್ನು ಅಕ್ರಮವಾಗಿ ಹಣ ಗಳಿಸುವ ಉದ್ದೇಶದಿಂದ ಬೆಳೆದಿದ್ದು, ಈ ಮೂಲಕ ಎನ್.ಡಿ.ಪಿ.ಎಸ್. ಕಾಯ್ದೆ ಕಲಂ 20(a)(i) ರ

ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ಮತ್ತು ವಿಶೇಷ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಆರೋಪಿತರಾದ ನೀವು ಮೇಲೆ ಹೇಳಿದ ಆರೋಪಗಳಿಗೆ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 1 ನೇ ದಿವಸ ಜುಲೈ ಮಾಹೆಯ 2026 ನೇ ಇಸವಿಯಂದು.

(ರವೀಂದ್ರ ಹೆಗಡೆ )
ಪ್ರಧಾನ ಜಿಲ್ಲಾ ಮತ್ತು ಸತ್ರ
ಹಾಗೂ ವಿಶೇಷ ನ್ಯಾಯಧೀಶರು
ಚಿಕ್ಕಮಗಳೂರು

<u>ಆರೋಪಿಯ ಆಪಾದನೆ</u>

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ:ತಿಳಿಯಿತು

ಪ್ರಶ್ನೆ -2: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ: ನಾನು ತಪ್ಪು ಮಾಡಿಲ್ಲ .

(ದಿನಾಂಕ 1 ನೇ ದಿವಸ ಜುಲೈ ಮಾಹೆಯ 2026 ರಂದು ತೆರೆದನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

ಸಹಿ
*( ರವೀಂದ್ರ ಹೆಗಡೆ )*
ಪ್ರಧಾನ ಜಿಲ್ಲಾ ಮತ್ತು ಸತ್ರ
ಹಾಗೂ ವಿಶೇಷ ನ್ಯಾಯಧೀಶರು
ಚಿಕ್ಕಮಗಳೂರು

ಎಂವಿಪಿ